# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 105 (1159) |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 16-12-2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಕೈಮಗ್ಗ ನಿಗಮವು 1975 ರಿಂದ ಒಂದು ಪ್ರತಿಷ್ಠಿತ ನಿಗಮವಾಗಿದ್ದು ಕೈಮಗ್ಗ ನೇಕಾರರಿಗೆ ಕೆಲಸವನ್ನು ಒದಗಿಸಿ ಕೈಮಗ್ಗದ ಬಟ್ಟೆಯನ್ನು ಇಡೀ ರಾಜ್ಯಕ್ಕೆ ಪೂರೈಸಿದ್ದು ಕರ್ನಾಟಕ ಜವಳಿ ಮೂಲ ಸೌಕರ್ಯಗಳ ಅಭಿವೃದ್ಧಿ ನಿಗಮದೊಂದಿಗೆ ವಿಲೀನ ಪ್ರಕ್ರಿಯೆಯಿಂದ ಕೈಮಗ್ಗ ನೇಕಾರರ ಹಿತವನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದೇ; | ಸಾರ್ವಜನಿಕ ಉದ್ದಿಮೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ – FD 10 INV 2025, Bengaluru, Dated:15 February, 2025 ರ ಪ್ರಕಾರ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಕರ್ನಾಟಕ ಜವಳಿ ಮೂಲ ಸೌಕರ್ಯಗಳ ಅಭಿವೃದ್ಧಿ ನಿಗಮದ ಜೊತೆಗೆ ವಿಲೀನಗೊಳಿಸಲು ನಿರ್ಣಯಿಸಲಾಗಿದೆ.<br><br>ಸದರಿ ವಿಲೀನ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿದ್ದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯಗಳ ಅಭಿವೃದ್ಧಿ ನಿಗಮದ ಜೊತೆಗೆ ವಿಲೀನಗೊಳಿಸುವ ಸಂದರ್ಭದಲ್ಲಿ ಕೈಮಗ್ಗ ನೇಕಾರರ ಹಿತವನ್ನು ಕಾಯ್ದುಕೊಳ್ಳಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ವಿಲೀನ ಪ್ರಕ್ರಿಯೆ ಆದ ನಂತರವು ಮುಂದುವರೆಸಲಾಗುವುದು.<br><br>• ಕೆ.ಹೆಚ್.ಡಿ.ಸಿ. ನಿಗಮದ ನೇಕಾರರಿಗೆ ನಿರಂತರ ನೂಲು ಪೂರೈಕೆ ಮಾಡಿ ಉದ್ಯೋಗ ಒದಗಿಸುವುದು.<br>• ಕೆ.ಹೆಚ್.ಡಿ.ಸಿ. ನಿಗಮದ ನೇಕಾರರಿಗೆ ಪರಿವರ್ತನಾ ಶುಲ್ಕ ಪಾವತಿಸುವುದು.<br>• ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮಾಡಲು ಇ-ಕಾಮರ್ಸ್ ವೇದಿಕೆ ಕಲ್ಪಿಸುವುದು.<br>• ಬೆಂಗಳೂರು ಅಂತರಾಷ್ಟ್ರೀಯ ನಿಲ್ದಾಣದ ಆವರಣದಲ್ಲಿ ಕೈಮಗ್ಗ ಮಾರಾಟ ಮಳಿಗೆಯ ಕಲಾಲೋಕ ಸ್ಥಾಪನೆ ಮೂಲಕ ಮಾರುಕಟ್ಟೆ ಸೌಲಭ್ಯ ಒದಗಿಸುವುದು. |
| ಆ | ವಿಲೀನ ಪ್ರಕ್ರಿಯೆ ಅನುಷ್ಠಾನಗೊಂಡಲ್ಲಿ ಕೈಮಗ್ಗ ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ನೇಕಾರರು ವಿದ್ಯುತ್ ಮಗ್ಗಗಳನ್ನು ಪರಿವರ್ತಿಸಿಕೊಳ್ಳಲು ದುಡಿಮೆ ಬಂಡವಾಳ ಮತ್ತು ಸಲಕರಣೆಗಳ ಖರೀದಿಗೆ ಆರ್ಥಿಕ ನೆರವು ನೀಡಲಾಗುವುದೆ; | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯಗಳ ಅಭಿವೃದ್ಧಿ ನಿಗಮದೊಂದಿಗೆ ವಿಲೀನ ಮಾಡಿದ್ದಲ್ಲಿ ಆಸಕ್ತ ಕೈಮಗ್ಗ ನೇಕಾರರು ವಿದ್ಯುತ್‌ಮಗ್ಗಗಳನ್ನು ಪರಿವರ್ತಿಸಿಕೊಳ್ಳಲು ಇಲಾಖೆಯಿಂದ ಈ ಕೆಳಕಂಡ ಯೋಜನೆಗಳಡಿ ಆರ್ಥಿಕ ಸಹಾಯಧನ ನೀಡಲಾಗುವುದು.<br><br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ<br>• ವಿದ್ಯುತ್ ರಿಯಾಯಿತಿ ಸಹಾಯಧನ – 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ. |

ಇ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸಿ ಸೇವಾ ನಿವೃತ್ತಿ ಹೊಂದಿದ ನೌಕರರಿಗೆ ಬರಬೇಕಾದ ಗ್ರಾಚ್ಯುಟಿ, ರಜೆ ನಗದೀಕರಣ ಮುಂತಾದ ಸೌಲಭ್ಯಗಳನ್ನು ಪಾವತಿ ಮಾಡಿರದೇ ಇರುವ ವರದಿಗಳಿದ್ದು, 2023-24 ರಿಂದ ನಿವೃತ್ತಿ ಹೊಂದಿದ ನೌಕರರಿಗೆ ನೀಡಬೇಕಾಗಿರುವ ಸೌಲಭ್ಯಗಳ ಮೊತ್ತ ಅಂದಾಜು ರೂ.30.00 ಕೋಟಿ ಪಾವತಿಗೆ ಸರ್ಕಾರದಿಂದ ಯಾವ ಕ್ರಮಗಳನ್ನು ಜರುಗಿಸಲಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸಿ ಸೇವಾ ನಿವೃತ್ತಿ ಹೊಂದಿದ ನೌಕರರಿಗೆ ನೀಡಬೇಕಾದ ಗ್ರ್ಯಾಚುಟಿ, ರಜೆ ನಗದೀಕರಣ ಮುಂತಾದ ಸೌಲಭ್ಯಗಳ ವಿವರ ಈ ಕೆಳಗಿನಂತಿರುತ್ತದೆ:

(ಅಂದಾಜು ರೂ.ಲಕ್ಷಗಳಲ್ಲಿ)

| ವರ್ಷ | ನಿವೃತ್ತಿ ಹೊಂದಿದ ನೌಕರರ ಸಂಖ್ಯೆ | ಪಾವತಿಸಬೇಕಾದ ಗ್ರ್ಯಾಚುಟಿ ಮತ್ತು ಗಳಿಕೆ ರಜೆ ನಗದೀಕರಣ ಮೊತ್ತ (ಅಂದಾಜು ರೂ.ಲಕ್ಷಗಳಲ್ಲಿ) |
|---|---|---|
| 2023 | 45 | 569.80 |
| 2024 | 32 | 617.32 |
| 2025 (ಜನವರಿ ರಿಂದ ಆಗಸ್ಟ್ ವರೆಗೆ) | 19 | 352.82 |
| **ಒಟ್ಟು** | **96** | **1539.94 ಲಕ್ಷ + 50.00 ಲಕ್ಷ ಬಡ್ಡಿ ವಿಳಂಬ ಪಾವತಿಗೆ) = 1589.96 ಲಕ್ಷ (ಅಂದಾಜು)** |

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದರೂ ಸಹ ಹಂತ ಹಂತವಾಗಿ ನಿವೃತ್ತ ನೌಕರರಿಗೆ ಗ್ರ್ಯಾಚುಟಿ, ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ಪಾವತಿಸಲಾಗುತ್ತಿದೆ. ಅಲ್ಲದೆ, ನಿಗಮದ ನೌಕರರಿಗೆ ನಿವೃತ್ತಿ ನಂತರ ನೀಡಬೇಕಾದ ಗ್ರ್ಯಾಚುಟಿ ಮತ್ತು ಗಳಿಕೆ ರಜೆ ನಗದೀಕರಣ ಮೊತ್ತ ಅಂದಾಜು ರೂ.15.89 ಕೋಟಿಗಳ ಅನುದಾನವನ್ನು ಬಿಡುಗಡೆಗೆ ಕ್ರಮ ವಹಿಸಲಾಗುತ್ತಿದೆ.

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಹತ್ತಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದು, ಅದರ ಪುನಶ್ಚೇತನ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಪುನಶ್ಚೇತನಕ್ಕೆ, ಸರ್ಕಾರದಿಂದ ಈ ಕೆಳಕಂಡ ಕ್ರಮವಹಿಸಲಾಗಿರುತ್ತದೆ.

- ಸರ್ಕಾರಿ ಆದೇಶ ಸಂಖ್ಯೆ: ವಾಕೈ 22 ಜವಕೈಯೋ 2016, ದಿನಾಂಕ: 30.01.2018 ರನ್ವಯ ಕೆ.ಹೆಚ್.ಡಿ.ಸಿ. ನಿಗಮಕ್ಕೆ ಮಂಜೂರಾಗಿದ್ದ ರೂ.27.00 ಕೋಟಿ ಸಾಲವನ್ನು ಷೇರು ಬಂಡವಾಳವಾಗಿ (Equity) ಪರಿವರ್ತಿಸಲಾಗಿದೆ. ಇದೇ ಆದೇಶದಲ್ಲಿ ಕೆ.ಹೆಚ್.ಡಿ.ಸಿ. ನಿಗಮದ ಪುನಶ್ಚೇತನಕ್ಕಾಗಿ (ನಿವೃತ್ತ ನೌಕರರ ಸೌಲಭ್ಯ ಮತ್ತು ವ್ಯವಹಾರಿಕ ವೆಚ್ಚಗಳಿಗೆ) ರೂ.43.00 ಕೋಟಿ ಸಾಲವನ್ನು ಮಂಜೂರು ಮಾಡಲಾಗಿರುತ್ತದೆ.
- ಸರ್ಕಾರಿ ಆದೇಶ ಸಂಖ್ಯೆ: ಸಿಐ 55 ಜವಕೈಯೋ 2021, ದಿನಾಂಕ: 04.04.2022 ರಲ್ಲಿ ಪುನಶ್ಚೇತನ ಯೋಜನೆಯಡಿ ಕೆ.ಹೆಚ್.ಡಿ.ಸಿ ನಿಗಮಕ್ಕೆ ವಾಸ್ತವಿಕವಾಗಿ ಬಿಡುಗಡೆಯಾದ ರೂ.45.73 ಕೋಟಿ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು (ದಿನಾಂಕ 31.03.2021ರ ಅಂತ್ಯಕ್ಕೆ, ಇದ್ದಂತೆ) ಷೇರು ಬಂಡವಾಳವಾಗಿ (Equity) ಪರಿವರ್ತಿಸಲು ಸರ್ಕಾರದ ಈ ಆದೇಶದ ಮೂಲಕ ಅನುಮೋದನೆ ನೀಡಿದೆ.

ಮೇಲ್ಕಂಡ ಆದೇಶಗಳನ್ವಯ ಸಾಲವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲು, ಕೆ.ಹೆಚ್.ಡಿ.ಸಿ. ನಿಗಮದ ಅಧಿಕೃತ ಷೇರು ಬಂಡವಾಳವನ್ನು (Authorized Share Capital) ರೂ.95.00 ಕೋಟಿಯಿಂದ ರೂ.125.00 ಕೋಟಿಗೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ.

ಸಂಖ್ಯೆ : CI.262.JAKE.2025

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು